ಶ್ರೀ ಜಿ. ಬಸವಣ್ಣಪ್ಪ.— ಈ ಹಣ ಲ್ಯಾಪ್ಸ್ ಆಗದ ರೀತಿಯಲ್ಲಿ ವಿಶೇಷ ಘಟಕ ಯೋಜನೆಯನ್ನು ತೆಗೆದುಕೊಂಡಿದ್ದೇವೆ. ಜಿಲ್ಲಾ ಪರಿಷತ್ ಆಸ್ತಿತ್ವಕ್ಕೆ ಬಂದ ಮೇಲೆ ಅನೇಕ ಎಡರು ತೊಡರುಗಳು ಬಂದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡಿದ್ದೇವೆ. ಇದಕ್ಕೆ ಮೊಸಲಾಗಿಟ್ಟಿರುವ ಪೂರ್ತಿ ಹಣವನ್ನು ಯೂಟಿಲೈಸ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ೯೦ ಪರ್ಸೆಂಟ್ ಹಣವನ್ನು ಯುಟಿಲೈಸ್ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇಲಾಖೆಯೂ ಕೂಡ ಇದರ ಬಗ್ಗೆ ಜಾಗೃತವಾಗಿದೆ. ಬೋರ್ಡ್ ಚಾರ್ಜಸ್ ೧೨೦ ರೂಪಾಯಿ ಇದ್ದದನ್ನು ೧೫೦ ಮಾಡಬೇಕೆಂದು ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಈಗ ಆದಷ್ಟು ಬೇಗ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಪಡುತ್ತೇನೆ.

ಇನ್ನು ೧೫೦ ರೂಪಾಯಿಯಿಂದ ೨೫೦ ರೂಪಾಯಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ನಾನೇ ಖುದ್ದಾಗಿ ಹೋಗಿ ಡಾ॥ ರಾಜೇಂದ್ರ ಕುಮಾರಿ ಬಾಜಪೇಯಿ ಅವರಿಗೆ ಹೇಳಿದ್ದೇನೆ. ಅದು ಕ್ಲಿಯರ್ ಆಗಿ ಬರುವಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ನಮ್ಮ ಸೆಕ್ರೆಟರಿಯವರನ್ನು ಡೆಪ್ಯೂಟ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ. ಇನ್ನೇನು ಕಾಲೇಜುಗಳು ಪ್ರಾರಂಭವಾಗುತ್ತವೆ. ಇವರು ಡಿಸಿಷನ್ ತೆಗೆದುಕೊಂಡರೂ ಅದು ಇಂಪ್ಲಿಮೆಂಟ್ ಆಗಬೇಕಲ್ಲ. ಜೂನ್‌ನಲ್ಲಿ ಕಾಲೇಜುಗಳು ಪ್ರಾರಂಭವಾಗುತ್ತವೆ. ಆದಕಾಗಿ ತಕ್ಷಣ ಈ ಒಂದು ಅಕಾಡೆಮಿಕ್ ಇಯರ್‌ನಿಂದಲೇ ಈ ಹಣವನ್ನು ಅವರಿಗೆ ಸಿಗತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

SRI G. BASAVANNAPPA.— I am at it.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರಿಗೆ ನೀಡಿದ ಕೃಷಿ ಸಾಲಗಳ ಕುರಿತು

೧೯೮೦. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡದಲ್ಲಿ ವಿವಿಧ ಸಹಕಾರಿ ಸಂಘ ಸಂಸ್ಥೆಗಳು ೧೯೮೬-೮೭ ೧೯೮೭-೮೮ನೇ ಮಾರ್ಚ್ ಅಖೈರ್‌ವರೆಗೆ ರೈತರಿಗೆ ಕೊಟ್ಟಿರುವ ಸಾಲಗಳ ಮೊತ್ತವೆಷ್ಟು ? (ಎಸ್.ಸಿ.ಎಸ್.ವಿ.ಎಸ್.ಎಸ್. ಎಲ್.ಎಲ್.ಡಿ. ಬ್ಯಾಂಕ್ ಇತ್ಯಾದಿ)

ಆ) ರೈತರಿಂದ ಆಯಾ ವರ್ಷಗಳಲ್ಲಿ ಬರಬೇಕಾದ ಬಡ್ಡಿ ಮತ್ತು ಸಂಸ್ಥಿ ಬಡ್ಡಿಯ ಮೊತ್ತವೆಷ್ಟು

ಇ) ಇದರಲ್ಲಿ ಆಯಾ ವರ್ಷಗಳಲ್ಲಿ ಸಾಲ ಮನ್ನಾ ಮಾಡಲಾಗಿದೆಯೇ ಅಥವಾ ಬಡ್ಡಿ ಮನ್ನಾ ಮಾಡಲಾಗಿದೆಯೇ ?

ಈ) ಹಾಗಿದ್ದಲ್ಲಿ ಈ ಕಾರ್ಯದಿಂದ ರೈತರಿಗೆ ಒದಗಿರುವ ಪ್ರಯೋಜನವೇನು ?

ಶ್ರೀ ಹೆಚ್. ವಿಶ್ವಾನಾಥಯ್ಯ (ಮಾನ್ಯ ಸಹಕಾರ ಮಂತ್ರಿಗಳು).—

ಅ) ೧೯೮೬-೮೭ ಹಾಗೂ ೧೯೮೭-೮೮ನೇ ಆರ್ಥಿಕ ಸಾಲಿನಲ್ಲಿ ವಿವಿಧ ಸಹಕಾರಿ ಸಂಸ್ಥೆಗಳು ಈ ಕೆಳಕಂಡಂತೆ ಸಾಲ ನೀಡಿವೆ.

		(ರೂ. ಕೋಟಿಗಳಲ್ಲಿ)	
		೧-೪-೧೯೮೬ ರಿಂದ ೩೧-೩-೧೯೮೭ ರವರೆಗೆ	೧-೪-೮೭ ರಿಂದ ೩೧-೩-೮೮ ರವರೆಗೆ
೧)	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ)	೨೬.೭೩	೨೪.೬೭
೨)	ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು (ದೀರ್ಘಾವಧಿ ಸಾಲ)	೩.೨೭	೩.೩೪

ಆ) ೧೯೮೬-೮೭ನೇ ಸಾಲಿನಲ್ಲಿ ೩.೬೬ ಕೋಟಿಗಳ ಬಡ್ಡಿಹಾಗೂ ರೂ. ೦.೫೩ ಕೋಟಿ ರೂ.ಗಳ ಸುಸ್ತಿ ಬಡ್ಡಿ ಬರಬೇಕಾಗಿದೆ ಮತ್ತು ೧೯೮೭-೮೮ನೇ ಸಾಲಿನಲ್ಲಿ ೪.೨೮ ಕೋಟಿ ರೂ. ಬಡ್ಡಿ ಹಾಗೂ ೦.೫೪ ಕೋಟಿ ರೂ. ಸುಸ್ತಿ ಬಡ್ಡಿ ಬರಬೇಕಾಗಿದೆ.

ಇ) ಸಾಲ ಮನ್ನಾ ಮಾಡಲಾಗಿಲ್ಲ. ಆದರೆ ೧೯೮೬-೮೮ನೇ ಸಾಲಿನಲ್ಲಿ ಚಾಲ್ತಿ ಸಾಲ ಪಸೂಲಾತಿ ಮೇಲೆ ಭಾಗಶಃ ಬಡ್ಡಿ ರಿಯಾಯಿತಿಯನ್ನು ೧೯೮೭-೮೮ನೇ ಸಾಲಿನಲ್ಲಿ ಪೂರ್ಣ ಬಡ್ಡಿ ರಿಯಾಯಿತಿಯನ್ನು ನೀಡಲಾಗಿದೆ.

ಈ) ಈ ಕಾರ್ಯದಿಂದ ರೈತರಿಗೆ ಬಡ್ಡಿಯು ಹೊರೆಯು ತಪ್ಪಿದ ಪ್ರಯೋಜನವಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ೧-೪-೮೬ ರಿಂದ ೩೧-೩-೧೯೮೭ರವರೆಗೆ ೨೬ ಕೋಟಿ ೭೩ ಲಕ್ಷ ರೂಪಾಯಿಯನ್ನು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಂದ ಸಾಲ ಕೊಡಲಾಗಿತ್ತು. ೧-೪-೮೭ ರಿಂದ ೩೧-೩-೮೮ರವರೆಗೆ ೨೪ ಕೋಟಿ ೬೭ ಲಕ್ಷ ರೂಪಾಯಿ ಸಾಲ ಕೊಟ್ಟಿತ್ತು. ೮೬-೮೭ರಲ್ಲಿ ಎರಡು ಕೋಟಿ ರೂಪಾಯಿ ಜಾಸ್ತಿ ಇತ್ತು ಆದರೆ ೮೭-೮೮ರಲ್ಲಿ ಈ ರೀತಿ ಕಡಿಮೆ ಯಾಗಲಿಕ್ಕೆ ನಿಜವಾಗಿ ಸಾಲ ಕೊಡುವಾಗ ಚೌಕಾಸಿ ಏನಾದರೂ ತೋರಿಸಿದ್ದೀರಾ?

ಶ್ರೀ ಹೆಚ್. ವಿಶ್ವನಾಥಯ್ಯ.—ಇಲ್ಲ.

ಶ್ರೀ ಬಿ. ಎಂ. ಇದಿನಬ್ಬ.—೧೯೮೬-೮೭ನೇ ಸಾಲಿನಲ್ಲಿ ಚಾಲ್ತಿ ಸಾಲ ವಸೂಲಾತಿಯ ಮೇಲೆ ಭಾಗಶಃ ಬಡ್ಡಿ ರಿಯಾಯಿತಿಯೆಂದು ೧೯೮೭-೮೮ನೇ ಸಾಲಿನಲ್ಲಿ ಪೂರ್ಣ ಬಡ್ಡಿ ರಿಯಾಯಿತಿಯನ್ನು ನೀಡಲಾಗಿದೆ ಎಂದು ಹೇಳಿದ್ದೀರಿ. ೧೯೮೬-೮೭ರಲ್ಲೂ ಕೂಡಾ ೧೯೮೭-೮೮ರ ರೀತ್ಯಾ ಪೂರ್ಣ ಬಡ್ಡಿ ರಿಯಾಯಿತಿಯನ್ನು ನೀಡಿದ್ದರೆ ಹೆಚ್ಚಿನ ಉಪಕಾರವಾಗುತ್ತಿತ್ತು. ಏತಕ್ಕೆ ಹಾಗೆ ಮಾಡಿದಿರಿ ?

ಶ್ರೀ ಹೆಚ್. ವಿಶ್ವನಾಥಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಅವರಿಗೆ ಈಗಾಗಲೇ ಜಾರಿಯಲ್ಲಿರುವ ಆದೇಶದ ಪರಿಚಯ ಎಂದು ನಾನು ಭಾವಿಸಿದ್ದೇನೆ. ೧೯೮೬-೮೭ರಲ್ಲಿ ಯಾವ ಆದೇಶ ಜಾರಿಯಲ್ಲಿತ್ತು ಎಂದು ಹೇಳಿದರೆ, ಯಾರು ಚಾಲ್ತಿ ಸಾಲವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡುತ್ತಾರೋ ಅಂಥವರಿಗೆ ಶೇಕಡ ಏಳರಷ್ಟು ಬಡ್ಡಿಯನ್ನು ಕೊಟ್ಟರೆ ಇನ್ನುಳಿದ ಬಡ್ಡಿಯನ್ನು ಸರ್ಕಾರವೇ ಅದನ್ನು ಭರಿಸುತ್ತಿತ್ತು. ೩೦-೪-೮೮ರ ದಿನಾಂಕದೊಳಗೆ ಇರತಕ್ಕಂಥ ಚಾಲ್ತಿ ಸಾಲ ಬಾಕಿ ಸಾಲ ಎರಡನ್ನೂ ೩೦-೪-೮೮ರೊಳಗೆ ಪಾವತಿ ಮಾಡಿದಲ್ಲಿ ಅವರಿಗೆ ಪೂರ್ಣ ಬಡ್ಡಿಯನ್ನು ಬಿಡಬೇಕು ಎಂದು ಸರ್ಕಾರ ಆದೇಶ ಮಾಡಿದ್ದುದರಿಂದ ಅವರಿಗೆ ಆ ರಿಯಾಯಿತಿ ದೊರೆತಿದೆ.

ಶ್ರೀ ಬಿ. ಎಂ. ಇದಿನಬ್ಬ.—ಈಗ ತಾವು ಇಷ್ಟೆಲ್ಲಾ ಸಾಲ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ. ಆದರಲ್ಲಿ ಪರಿಶಿಷ್ಟ ವರ್ಗದವರಿಗೆ ಮತ್ತು ಪರಿಶಿಷ್ಟ ಜನಾಂಗದವರಿಗೆ ಎಷ್ಟು ಜನರಿಗೆ ತಾವು ಸಾಲವನ್ನು ಕೊಟ್ಟಿದ್ದೀರಿ ?

ಶ್ರೀ ಹೆಚ್. ವಿಕಾಂತಯ್ಯ.—ಅಧ್ಯಕ್ಷರೇ, ನಿಗಧಿಯಾದಂಥ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರ ಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ವಿಫಲವಾದ ಬಾವಿಗಳ ಮೇಲೆ ರೈತರಿಂದ ಬಡ್ಡಿ ವಸೂಲಾತಿ

೧೬೪೪. ಶ್ರೀ ಸಿ.ಪಿ. ಮೂಡಲಗಿರಿಯಪ್ಪ (ಶಿರಾ)—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಫಲವಾದ ರೈತರ ಬಾವಿಗಳಿಗೆ ರಿಯಾಯಿತಿಯ ಮೊತ್ತವನ್ನು ಸರ್ಕಾರವು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೆ ಪಾವತಿ ಮಾಡದೆ ಸದರಿ ಬ್ಯಾಂಕಿನವರು ರೈತರಿಂದ ಬಡ್ಡಿ ವಸೂಲು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರವು ಬಡ್ಡಿ ಮನ್ನಾ ಮಾಡಿರುವ ಸೌಲಭ್ಯವನ್ನು ಮಧ್ಯಂತರ ಬಡ್ಡಿ ಹೊರೆ ಹೊರುತ್ತಿರುವ ರೈತರಿಗೆ ವಿಸ್ತರಿಸದಿರುವುದು ಸದರಿ ರೈತರಿಗಾಗಿರುವ ಅನ್ಯಾಯವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ವಿಕಾಂತಯ್ಯ (ಮಾನ್ಯ ಸಹಕಾರ ಮಂತ್ರಿಗಳು). —

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಭರ್ತಿ ಮಾಡದೇ ಇರುವ ಗ್ರಾಮಲೆಕ್ಕಿಗರ ಹುದ್ದೆಗಳು

೧೬೫೧. ಶ್ರೀ ಜಿ.ಎಸ್. ಶಿವಸಂಜಪ್ಪ (ಗುಬ್ಬಿ).— ಮಾನ್ಯ ಕಂದಾಯ ಮತ್ತು ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ತುಮಕೂರು ಜಿಲ್ಲೆಯಲ್ಲಿ ಭರ್ತಿ ಮಾಡದೇ ಇರುವ ಗ್ರಾಮಲೆಕ್ಕಿಗರ ಹುದ್ದೆ ಎಷ್ಟು ? ಎಷ್ಟು ವರ್ಷಗಳಿಂದ ಖಾಲಿ ಇದೆ ? ಹಾಗಿದ್ದಲ್ಲಿ ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

(ಆ) ತುಮಕೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲಾಗಿದೆಯೇ?

(ಇ) ಆ ಪೈಕಿ ವಸತಿ ಒದಗಿಸಿದ ಮತ್ತು ವಸತಿ ಒದಗಿಸದಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

(ಅ) ತುಮಕೂರು ಜಿಲ್ಲೆಯಲ್ಲಿ ೧೦೩ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇದ್ದರೂ ಇತ್ತೀಚಿನ ಸರ್ಕಾರಿ ಆದೇಶ ಸಂ. ಆರ್‌ಡಿ ೧೯೦ ಬಿಎಸ್‌ಸಿ ೮೭ ದಿನಾಂಕ ೨೨-೪-೧೯೮೮ರಲ್ಲಿ ಮಂಜೂರು ಪಂಚಾಯತ್ ಗಳ ರಚನೆಯ ತತ್ಪರಿಣಾಮವಾಗಿ ಕಂದಾಯ ವೃತ್ತಗಳನ್ನು ವಿಸ್ತರಿಸಿ ಸುಮಾರು ೧೭೫ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಸೃಜಿಸಿಲಾಗಿದೆ. ಆದುದರಿಂದ ಪ್ರಸ್ತುತ ಪರಿಸ್ಥಿತಿಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿಯಿರುವುದಿಲ್ಲ.